# ಸಂವಿಧಾನ

## ಸಕಲ ಜೀವಾತ್ಮಗಳಿಗೂ ಹಾಸು ಹೊಕ್ಕು

ವೈವಿಧ್ಯತೆಯ ಸುಂದರ ಸಮಾಜದಲ್ಲಿ ಸಮನ್ವಯದ ಸೂತ್ರದ ಕಸೂತಿಯನ್ನು ಸಂವಿಧಾನ ಹೆಣೆದಿದೆ. ಬಣ್ಣಬಣ್ಣದ ಬಟ್ಟೆಯನ್ನು ಹೊಂದಾಣಿಕೆ ಮಾಡಿ, ಈ ನೆಲದ ಜೀವಗಳಿಗೆಲ್ಲ ಬೆಚ್ಚಗಿನ ಕೌದಿಯನ್ನು ಅದು ಹೊಲಿದಿದೆ. ಸಂವಿಧಾನ ನಮ್ಮ ಬುದ್ಧಿ ಭಾವಗಳ ಭಾಗವೇ ಆಗಿದೆ. ನಮ್ಮ ಮನೋಭೂಮಿಕೆಯಲ್ಲಿ ರಾಷ್ಟ್ರೀಯ ಪ್ರಜ್ಞೆಯ ಬೀಜವನ್ನು ಅದು ಬಿತ್ತಿದೆ. ಸೌಹಾರ್ದತೆಯ ಸಂಕೇತದ ರಾಜ್ಯಾಂಗ ಭ್ರಾತೃತ್ವದ ಜೀವ ಸೆಲೆಯಂತೆ ನಮ್ಮನ್ನು ಪೋಷಿಸುತ್ತಿದೆ. ನಿತ್ಯ ಬದುಕನ್ನು ಪ್ರಭಾವಿಸುವ ಅದು ನಮ್ಮ ಜೀವ ರಕ್ಷಕ ಕವಚವೂ ಹೌದು. ಸಂವಿಧಾನ ನಿತ್ಯ ಜೀವನದಲ್ಲಿ ಹೇಗೆ ನಮ್ಮ ಅನುಭವಕ್ಕೆ ಬರುತ್ತದೆ ಎನ್ನುವ ವಿವರ ಈ ವಾರದ 'ಸುಧಾ' ಗಣರಾಜ್ಯೋತ್ಸವ ವಿಶೇಷ.

■ **ನಿರೂಪಣೆ: ಆರ್‌ಕೆಟಿ**

## ಸೌಹಾರ್ದ ಸಮಾಜಕ್ಕೆ ಶ್ರೀರಕ್ಷೆ

ರಾಷ್ಟ್ರ ಎಂಬ ಪರಿಕಲ್ಪನೆಗೆ ಸ್ಪಷ್ಟರೂಪ ನೀಡಿದ ಸಂವಿಧಾನ ಯಾವತ್ತೂ ಪ್ರಸ್ತುತ. ಯಾವ ಕ್ಷಣದಲ್ಲಿ ಈ ದೇಶಕ್ಕೆ ಸಂವಿಧಾನವನ್ನು ಅಳವಡಿಸಿಕೊಂಡೆವೋ ಅವತ್ತಿನಿಂದ ಇದು ನಮ್ಮ ಬದುಕಿನ ಭಾಗವಾಗಿದೆ. ಸಮಾಜದಲ್ಲಿ ಸೌಹಾರ್ದ ಮತ್ತು ಭ್ರಾತೃತ್ವದ ಬದುಕನ್ನು ಇದು ಕಲ್ಪಿಸುತ್ತದೆ.



ನಮ್ಮ ನಡುವೆ ಉಂಟಾಗುವ ಯಾವುದೇ ಭಿನ್ನಮತ ಮತ್ತು ಅಪಸ್ವರದ ಧ್ವನಿಗೆ ಸಂವಿಧಾನವೇ ಸಮನ್ವಯದ ನ್ಯಾಯವನ್ನು ನೀಡುತ್ತದೆ. ದೇಶದ ಒಳಗೆ ಹಲವು ರೀತಿಯ ಅಪರಾಧ ಕೃತ್ಯಗಳು ಜರುಗುತ್ತಿವೆ. ಅದಕ್ಕೆ ಉತ್ತರವನ್ನು ಸಂವಿಧಾನದ ಅಡಿಯಲ್ಲಿ ರೂಪಿತವಾಗಿರುವ ಕಾನೂನು ಕಂಡುಕೊಳ್ಳುತ್ತದೆ. ಅದರ ಆಶಯ ಯಾವತ್ತೂ ಜಡ ಅಲ್ಲ. ಚಲನಶೀಲ ಗುಣದ ಸಂವಿಧಾನದ ಆಶ್ರಯದಲ್ಲಿಯೇ ನಮಗೆಲ್ಲರಿಗೂ ಜೀವನ ಭದ್ರತೆ ಸಿಕ್ಕಿದೆ. ಸಮಾಜಕ್ಕೆ ಘಾತಕ ಅನ್ನಿಸುವ ಎಲ್ಲ ಸಂಗತಿಗಳನ್ನು ನಿಯಂತ್ರಿಸುವ, ಅದಕ್ಕೆ ಪರಿಹಾರವನ್ನು ಸೂಚಿಸುವ ಕ್ರಿಯೆಯನ್ನು ಸಂವಿಧಾನ ಮಾಡುತ್ತದೆ. ಈ ದೇಶದ ಕಟ್ಟಕಡೆಯ ಮನುಷ್ಯನಿಗೂ ಜೀವಿಸುವ ಹಕ್ಕನ್ನು ಮತ್ತು ಆತನಿಗೆ ನೈತಿಕ ಬಲವನ್ನು ಕೊಟ್ಟಿರುವುದು ಸಂವಿಧಾನ.

ಸಂವಿಧಾನವನ್ನು ನಾನು ನಿತ್ಯವೂ ಅನುಭವಿಸುತ್ತೇನೆ. 'ಭಾರತೀಯರಾದ ನಾವು' ಎನ್ನುವ ಸಂವಿಧಾನದ ಪ್ರಸ್ತಾವನೆಯ ಮಾತು, ನನಗೆ ಯಾರೂ ಇಲ್ಲ ನಾನು ಒಬ್ಬಂಟಿ ಎಂದು ನೊಂದುಕೊಳ್ಳುವ ವ್ಯಕ್ತಿಗೆ ಅದು ಸಾಂತ್ವನ ಸಹೋದರತ್ವದ ಬೆಸುಗೆ ಹಾಕುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿದವನು ನಾನು, ಅಂಚಿನ ವ್ಯಕ್ತಿಗಳ ಜೊತೆ ಸಂಪರ್ಕ ಇದೆ. ತಳಸಮುದಾಯವನ್ನು ಹತ್ತಿರದಿಂದ ನೋಡಿರುವುದರಿಂದ, ಈ ವ್ಯವಸ್ಥೆಯ ಪಾಲುದಾರ ಆಗಿರುವ ನಾನು ಸಂವಿಧಾನ ಸಮಾಜದ ಹಾಸುಹೊಕ್ಕಾಗಿದೆ ಎನ್ನುವದನ್ನು ಬಲ್ಲೆ. ಅದು ಹುಟ್ಟಿದಾಗಿನಿಂದ ಇಂದಿನವರೆಗೂ ನಮಗೆ ಶ್ರೀರಕ್ಷೆಯಾಗಿದೆ. ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿದಿದೆ. ಸ್ವಾಭಿಮಾನದಿಂದ ಬದುಕುವ ಹಕ್ಕನ್ನು ತಂದುಕೊಟ್ಟಿದೆ.

–**ಬಿ.ಎಂ. ಗುರುನಾಥ**, ಕವಿ, ಚಿತ್ರದುರ್ಗ